


# ಮಯೂಖಾ ಜಿಗಿತ!

■ ಕೆ.ಓಂಕಾರ ಮೂರ್ತಿ




ದೇಶದ ಯುವ ಕ್ರೀಡಾಪಟುಗಳಿಗೆ ಇನ್ನೂ ಸ್ಫೂರ್ತಿಯ ಚಿಲುಮೆ ಆಗಿರುವ 'ಪಯ್ಯೋಳಿ ಎಕ್ಸ್‌ಪ್ರೆಸ್' ಖ್ಯಾತಿಯ ಪಿ.ಟಿ.ಉಷಾ ಕೇರಳದವರು. ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಏಕೈಕ ಪದಕ ಗೆದ್ದುಕೊಟ್ಟ ಅಂಜು ಬಾಬಿ ಜಾರ್ಜ್ ಕೂಡ ಅಲ್ಲಿನವರೇ. ಅವರು ಸಾಗಿದ ಹಾದಿಯಲ್ಲಿ ಈಗ ಹೆಜ್ಜೆ ಇಡುತ್ತಿರುವ ಹುಡುಗಿ ಮಯೂಖಾ ಜಾನಿ.

ಕೇರಳದ ಕೋಯಿಕೋಡ್‌ನ 23 ವರ್ಷದ ಈ ಹುಡುಗಿ ಈಗ ದೇಶದ ಅಥ್ಲೆಟಿಕ್ಸ್‌ನಲ್ಲಿ ಸಂಚಲನ ಮೂಡಿಸುತ್ತಿರುವ ನವ ಕ್ರೀಡಾತಾರೆ.

2012ರ ಲಂಡನ್ ಒಲಿಂಪಿಕ್ಸ್‌ಗೆ ಈಗಾಗಲೇ ಅರ್ಹತೆ ಪಡೆದಿರುವ ಮಯೂಖಾ, ಲಾಂಗ್‌ಜಂಪ್ ಹಾಗೂ ಟ್ರಿಪಲ್ ಜಂಪ್‌ನಲ್ಲಿ ಮಿಂಚುತ್ತಿದ್ದಾರೆ.

ಹಾಗಾಗಿಯೇ ಮಯೂಖಾ ಅವರತ್ತ ಈಗ ಎಲ್ಲರ ದೃಷ್ಟಿ ಹರಿದಿದೆ. ಏಷ್ಯನ್ ಗ್ರ್ಯಾನ್‌ಪ್ರಿ ಅಥ್ಲೆಟಿಕ್ ಕೂಟದಲ್ಲಿ ಅವರು ಟ್ರಿಪಲ್ ಜಂಪ್‌ನಲ್ಲಿ ನೂತನ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದರು. ಅದು ಒಲಿಂಪಿಕ್ಸ್ ಹಾದಿಯನ್ನು ಸುಗಮಗೊಳಿಸಿತ್ತು.

ಭರವಸೆ ಹುಡುಗಿ ಮಯೂಖಾ ಇತ್ತೀಚೆಗೆ ದಕ್ಷಿಣ ಕೊರಿಯಾದ ಡೇಗುವಿನಲ್ಲಿ ನಡೆದ 13ನೇ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಲಾಂಗ್ ಜಂಪ್‌ನ ಫೈನಲ್ ತಲುಪಿದ್ದರು. ಆ ಮೂಲಕ ವೈಯಕ್ತಿಕ ವಿಭಾಗದಲ್ಲಿ ಈ ಸಾಧನೆ ಮಾಡಿದ ಭಾರತದ ಮೂರನೇ ಅಥ್ಲೀಟ್.

ಜಪಾನ್‌ನ ಕೋಬೆಯಲ್ಲಿ ನಡೆದ ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಜಾನಿ ಲಾಂಗ್ ಜಂಪ್‌ನಲ್ಲಿ 6.56 ಮೀ. ದೂರ ಜಿಗಿದು ಚಿನ್ನ ಜಯಿಸಿದ್ದರು. ಜೂನ್‌ನಲ್ಲಿ ಬೆಂಗಳೂರಿನಲ್ಲಿ ಜರುಗಿದ 51ನೇ ರಾಷ್ಟ್ರೀಯ ಸೀನಿಯರ್ ಅಂತರ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಲಾಂಗ್ ಜಂಪ್‌ನಲ್ಲಿ ಕೂಡ ದಾಖಲೆ ನಿರ್ಮಿಸಿದ್ದರು. ಅವರು 6.63 ಮೀ. ದೂರ ಜಿಗಿದಿದ್ದರು.

ಮಯೂಖಾ ಅವರ ಗುರಿ ಒಲಿಂಪಿಕ್ಸ್‌ನಲ್ಲಿ ಮಿಂಚುವುದು.